# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1187 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ |
| ಉತ್ತರಿಸಬೇಕಾದ ದಿನಾಂಕ | 15.12.2023 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನಕ್ಕೆ ಒಳಪಡುವ ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಜಿಲ್ಲಾ ಪಂಚಾಯಿತ್ ಮೂಲಕ 2004 ರಿಂದ 2011 ವರೆಗೆ ಹೊರಸಂಪನ್ಮೂಲದಡಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಹಾಗೂ ಸಹಶಿಕ್ಷಕರುಗಳಿಗೆ ವಯೋಮಿತಿ ಸಡಿಲಿಸಿ ಕೃಪಾಂಕದಂತೆ ಅಂತಿಮ ಆಯ್ಕೆಪಟ್ಟಿ ತಯಾರಿಸಿ ಪಟ್ಟಿಯಲ್ಲಿ ಅನುಮೋದನೆಗೊಂಡಿದ್ದ ಅರ್ಹ 06 ಅಭ್ಯರ್ಥಿಗಳ ಪೈಕಿ 2016 ರಲ್ಲಿ ಒಬ್ಬ ದೈಹಿಕ ಶಿಕ್ಷಣ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡಲಾಗಿದ್ದು ವಯೋಮಿತಿ ಮೀರಿದ ಉಳಿದ ಅರ್ಹ ಪ್ರಾಂಶುಪಾಲರ ಹಾಗೂ ಸಹಶಿಕ್ಷಕರುಗಳನ್ನು ಸಂಘದ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದಿದ್ದರೂ ನೇಮಕಾತಿ ಮಾಡದೇ ಇರಲು ಕಾರಣವೇನು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಒಟ್ಟು 833 ವಸತಿ ಶಾಲೆ/ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ದಾಖಲಾತಿ ಘಟಕ (CAC) ವು ಶಿಕ್ಷಕರ ಹುದ್ದೆಯ ನೇರ ನೇಮಕಾತಿಗೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಿದ ಹೊರಸಂಪನ್ಮೂಲ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:20204/2011 ಹಾಗೂ ಸಂಯೋಜಿತ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:13.07.2012 ರ ಆದೇಶದಲ್ಲಿ ನಿರಂತರ ಸೇವೆ ಸಲ್ಲಿಸಿದ ಅಭ್ಯರ್ಥಿಗಳಿಗೆ ವಾರ್ಷಿಕ 5% ರಷ್ಟು ಕೃಪಾಂಕ ನೀಡಲು ಆದೇಶಿಸಲಾಗಿರುತ್ತದೆ. ಅದರಂತೆ ಅರ್ಹ ಪ್ರಾಂಶುಪಾಲರು ಮತ್ತು ಶಿಕ್ಷಕರಿಗೆ ಕೃಪಾಂಕ ನೀಡಲಾಗಿರುತ್ತದೆ.<br><br>ಮೇಲ್ಕಂಡ ಹುದ್ದೆಗಳಿಗೆ ಸೇವಾ ಕೃಪಾಂಕ ಪಡೆದು ಆಯ್ಕೆ ಗೊಂಡ ಅಭ್ಯರ್ಥಿಗಳ ಪೈಕಿ ಶ್ರೀ ವೆಂಕಟೇಶ್ ಸಿ. ದೈಹಿಕ ಶಿಕ್ಷಣ ಶಿಕ್ಷಕರು, ಇವರು ಕೇಂದ್ರ ದಾಖಲಾತಿ ಘಟಕ (CAC) ಪ್ರಕಟಿಸಿದ ಫಲಿತಾಂಶ ಪಟ್ಟಿಯಲ್ಲಿ ಸದರಿಯವರ ಫಲಿತಾಂಶ Below Cut off) ಎಂದು ಪ್ರಕಟಣೆಯಾಗಿರುತ್ತದೆ. ಆದ್ದರಿಂದ ಸದರಿ ಅಭ್ಯರ್ಥಿಗೆ ಸೇವೆಗೆ ಸಲ್ಲಿಸಿದ ಶೈಕ್ಷಣಿಕ ವರ್ಷಕ್ಕೆ 5% ರಂತೆ ಕೃಪಾಂಕ ನೀಡಿ ನೇಮಕಾತಿ ಆದೇಶ ನೀಡಲಾಗಿದೆ. ವಯೋಮಿತಿ ಮೀರಿದ 05 ಅಭ್ಯರ್ಥಿಗಳಾದ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡ ಮತ್ತು ಸುರೇಶ್, ಗಣಿತ ಶಿಕ್ಷಕರು, ರಾಜೇಶ್ವರಮ್ಮ, ಹಿಂದಿ ಭಾಷಾ ಶಿಕ್ಷಕರು, ಚಂದ್ರಶೇಖರ್ ಎಸ್., ಆಂಗ್ಲ ಭಾಷಾ ಶಿಕ್ಷಕರು, ಎಸ್.ಕೆ ರಮೇಶ್ ಪ್ರಾಂಶುಪಾಲರು, ರವರ ಫಲಿತಾಂಶ ಪಟ್ಟಿಯಲ್ಲಿ (Over Age) ಎಂದು ಪ್ರಕಟಿಸಲಾಗಿರುತ್ತದೆ. |
| ಆ) | ಉಳಿದ ಪ್ರಾಂಶುಪಾಲರ ಹಾಗೂ ಸಹಶಿಕ್ಷಕರನ್ನು ನೇಮಕಾತಿ ಮಾಡದಿರಲು ಕಾರಣವೇನು; ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಂತೆ ಉಳಿದ 05 ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಆಗಿರುವ ತಾರತಮ್ಯವನ್ನು ಸರಿಪಡಿಸಿ ಸರ್ಕಾರ ಪ್ರಸ್ತುತ ನೇಮಕಾತಿ ಆದೇಶ ಮಾಡಲು ಕ್ರಮವಹಿಸುವುದೇ ; (ಮಾಹಿತಿ ಒದಗಿಸುವುದು) | ವಯೋಮಿತಿ ಮೀರಿದ ಸದರಿ 05 ಅಭ್ಯರ್ಥಿಗಳ ಪೈಕಿ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡ, ಗಣಿತ ಹೊರಸಂಪನ್ಮೂಲ ಶಿಕ್ಷಕರು ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿಸಂಖ್ಯೆ: 54499/2015 ರಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವನ್ನು ಆಲಿಸಿದ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.<br><br>"I hold that the petition is entitled for consideration of age relaxation. In view of the discussion made above, the respondents are directed to consider to relax the age and by giving service benefit as regards petitioner is concerned" |

| | | |
|---|---|---|
| | | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿ ವಯೋಮಿತಿ ಮೀರಿದ ಸದರಿ 05 ಅಭ್ಯರ್ಥಿಗಳನ್ನು ಒಳಗೊಂಡಂತೆ OMR ನ್ಯೂನತೆ ಹೊಂದಿದ ಅಭ್ಯರ್ಥಿಗಳ ವಿವರಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 71 ಮತ್ತು 73 ನೇ ಆಡಳಿತ ಮಂಡಳಿಯ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿ, 05 ವಯೋಮಿತಿ ಮೀರಿದ ಅಭ್ಯರ್ಥಿಗಳ ಪೈಕಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡ, ಗಣಿತ ಹೊರಸಂಪನ್ಮೂಲ ಶಿಕ್ಷಕರು ರವರನ್ನು ಮಾತ್ರ ಕೃಪಾಂಕಕ್ಕೆ ಪರಿಗಣಿಸಿ ನೇಮಕಾತಿ ನೀಡುವಂತೆ ಮಾನ್ಯ ನ್ಯಾಯಾಲಯದ ನಿರ್ದೇಶನದಂತೆ ಕ್ರಮಹಿಸಲು ತೀರ್ಮಾನಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ದಿ:06.08.2021 ರಲ್ಲಿ ತಾತ್ಕಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹಿಂಬರಹವನ್ನು ನೀಡಲಾಗಿರುತ್ತದೆ. ದಿನಾಂಕ: 06.09.2021 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ. |

ಸಕಇ-ಎಂಡಿಎಸ್/242/2023

**(ಡಾ.ಹೆಚ್.ಸಿ. ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು